# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 158 |
| ಸದಸ್ಯರ ಹೆಸರು | : ಡಾ\|\| ಎಂ.ಜಿ. ಮುಳೆ |
| ಉತ್ತರಿಸುವ ಸಚಿವರು | : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸುವ ದಿನಾಂಕ | : 05.03.2025 |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಬಸ್‌ದರವನ್ನು ಹೆಚ್ಚು ಮಾಡಿರುವುದರಿಂದ ಜನರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಡೀಸೆಲ್ ತೈಲ ಬೆಲೆ ಹೆಚ್ಚಳದೊಂದಿಗೆ ಸಿಬ್ಬಂದಿ ವೆಚ್ಚ, ವಾಹನ ಬಿಡಿ ಭಾಗಗಳ ವೆಚ್ಚ ಒಳಗೊಂಡಂತೆ ಒಟ್ಟು ಕಾರ್ಯಾಚರಣೆ ವೆಚ್ಚ ಹೆಚ್ಚಾಗಿರುವುದರಿಂದ ಸಾರಿಗೆ ನಿಗಮಗಳಿಗೆ ಹೆಚ್ಚಿನ ಆರ್ಥಿಕ ಹೊರೆಯುಂಟಾಗಿದ್ದು, ಪ್ರಯಾಣದರ ಪರಿಷ್ಕರಣೆಯು ಅನಿವಾರ್ಯವಾಗಿರುತ್ತದೆ.<br><br>ನಾಲ್ಕು ಸಾರಿಗೆ ಸಂಸ್ಥೆಗಳ ಹಿಂದಿನ / ಪ್ರಸ್ತುತ ಇಂಧನ ವೆಚ್ಚ ಹಾಗೂ ಸಿಬ್ಬಂದಿ ವೆಚ್ಚದ ಮಾಹಿತಿ ಈ ಕೆಳಗಿನಂತಿರುತ್ತದೆ:<br><br>(ರೂ.ಕೋಟಿಗಳಲ್ಲಿ)
<table>
<tr><th colspan="2">ವಿವರ</th><th>KSRTC</th><th>BMTC</th><th>NWKRTC</th><th>KKRTC</th><th>TOTAL</th></tr>
<tr><td rowspan="2">ಇಂಧನ ವೆಚ್ಚ (ದಿನಕ್ಕೆ)</td><td>ಹಿಂದಿನ</td><td>3.83</td><td>1.62</td><td>2.00</td><td>1.71</td><td>9.16</td></tr>
<tr><td>ಪ್ರಸ್ತುತ</td><td>5.44</td><td>2.28</td><td>2.73</td><td>2.76</td><td>13.21</td></tr>
<tr><td colspan="2">ಹೆಚ್ಚುವರಿ ಹೊರೆ ಪ್ರತಿ ದಿನಕ್ಕೆ ಸರಾಸರಿ</td><td>1.61</td><td>0.66</td><td>0.73</td><td>1.05</td><td>4.05</td></tr>
<tr><td rowspan="2">ಸಿಬ್ಬಂದಿ ವೆಚ್ಚ (ದಿನಕ್ಕೆ)</td><td>ಹಿಂದಿನ</td><td>4.57</td><td>2.99</td><td>2.76</td><td>2.53</td><td>12.85</td></tr>
<tr><td>ಪ್ರಸ್ತುತ</td><td>6.22</td><td>4.74</td><td>4.05</td><td>3.35</td><td>18.36</td></tr>
<tr><td colspan="2">ಹೆಚ್ಚುವರಿ ಹೊರೆ ಪ್ರತಿ ದಿನಕ್ಕೆ ಸರಾಸರಿ</td><td>1.65</td><td>1.75</td><td>1.29</td><td>0.82</td><td>5.51</td></tr>
<tr><td colspan="2">ಒಟ್ಟಾರೆ ಹೆಚ್ಚುವರಿ ಹೊರೆ ಪ್ರತಿ ದಿನಕ್ಕೆ</td><td>3.26</td><td>2.41</td><td>2.03</td><td>1.87</td><td>9.57</td></tr>
</table>
<br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2014ರಿಂದ ಪ್ರಯಾಣದರ ಹೆಚ್ಚಳವಾಗಿರುವುದಿಲ್ಲ.</td></tr>
<tr><td>ಆ.</td><td>ಸಾರಿಗೆ ಇಲಾಖೆಯಲ್ಲಿ ದಕ್ಷತೆಯನ್ನು ಹೆಚ್ಚಿಸಿ ಸೋರಿಕೆಯನ್ನು ತಡೆಗಟ್ಟಿ ಪ್ರಯಾಣದರವನ್ನು ಹಿಂದಿನಂತೆಯೇ ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;</td><td>ನಾಲ್ಕು ಸಾರಿಗೆ ನಿಗಮಗಳಲ್ಲಿ ಸಾರಿಗೆ ಆದಾಯ ಸೋರಿಕೆಯನ್ನು ತಡೆಗಟ್ಟಲು ವಿಭಾಗಗಳು ಹಾಗೂ ಕೇಂದ್ರ ಕಛೇರಿ ಮಟ್ಟದಲ್ಲಿ ತನಿಖಾ ತಂಡಗಳನ್ನು ರಚಿಸಿ ತನಿಖಾ ಕಾರ್ಯ ಕೈಗೊಳ್ಳಲಾಗಿದ್ದು, ಸೋರಿಕೆ ಕಂಡು ಬಂದಲ್ಲಿ ಸಂಬಂಧಿಸಿದವರ ವಿರುದ್ಧ ಪ್ರಕರಣ ದಾಖಲಿಸಿ, ಶಿಸ್ತು ಕ್ರಮ ಜಾರಿಗೊಳಿಸುವ ಕ್ರಮ ನಿರಂತರ ಜಾರಿಯಲ್ಲಿರುತ್ತದೆ.<br><br>ಸಾರಿಗೆಗಳ ಕಾರ್ಯಾಚರಣೆ ವೆಚ್ಚ ಹೆಚ್ಚಾಗಿದ್ದು, ಇದನ್ನು ಸರಿದೂಗಿಸಲು ಪ್ರಯಾಣ ದರ ಪರಿಷ್ಕರಣೆ ಅನಿವಾರ್ಯವಾಗಿತ್ತು.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ. | ಈ ಬಗ್ಗೆ ಸರ್ಕಾರ ಮರುಚಿಂತನೆ ನಡೆಸಿ ಜನರಿಗೆ ಅನುಕೂಲ ಮಾಡಿ ಕೊಡುವುದೇ; | ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಿಗೆ ದಿನಾಂಕ:26.02.2020ರಿಂದ ಜಾರಿಗೆ ಬರುವಂತೆ ಹಾಗೂ ಬೆಂ.ಮ.ಸಾ.ಸಂಸ್ಥೆಗೆ ದಿನಾಂಕ:10.01.2015ರಂದು ಜಾರಿಗೆ ಬರುವಂತೆ ದರ ಪರಿಷ್ಕರಣೆಯನ್ನು ಮಾಡಲಾಗಿರುತ್ತದೆ. ಅದರಂತೆ ಸದರಿ ದರ ಪರಿಷ್ಕರಣೆಯಾದಾಗ ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಿಗೆ ಇಂಧನ ದರ ರೂ.60.98 ಮತ್ತು ಬೆಂ.ಮ.ಸಾ.ಸಂಸ್ಥೆಗೆ ರೂ.46.24 ಯಾಗಿದ್ದು, ಪ್ರಸ್ತುತ ನಾಲ್ಕೂ ಸಾರಿಗೆ ಸಂಸ್ಥೆಗಳಿಗೆ ದಿನಾಂಕ:05.01.2025ರಂದು ಜಾರಿಗೆ ಬರುವಂತೆ ದರ ಪರಿಷ್ಕರಣೆಯಾದಾಗ ಪ್ರಸ್ತುತ ಸದರಿ ಇಂಧನ ದರ ರೂ.85.28ಗಳಾಗಿರುತ್ತದೆ.<br>**ವೆಚ್ಚ ಹೆಚ್ಚಾಗಿರುವುದರಿಂದ, ಅದನ್ನು ಸರಿದೂಗಿಸಲು ಪ್ರಯಾಣ ದರ ಪರಿಷ್ಕರಣೆ ಅನಿವಾರ್ಯವಾಗಿದೆ.** |
| ಈ. | ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಟ್ಟು ಪುರುಷರು ಮಾತ್ರ ಹೆಚ್ಚು ಹಣ ನೀಡಿ ಪ್ರಯಾಣ ಮಾಡಬೇಕೆಂಬ ನೀತಿಯಿಂದ ಗ್ರಾಹಕರಲ್ಲಿ ತಾರತಮ್ಯ ಮಾಡಿದಂತಾಗುವುದಿಲ್ಲವೇ? | ಮಹಿಳಾ ಸಬಲೀಕರಣದ ಭಾಗವಾಗಿ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ "ಶಕ್ತಿ" ಯೋಜನೆಯನ್ನು ಜಾರಿಗೆ ತರಲಾಗಿರುವುದರಿಂದ ಯಾವುದೇ ತಾರತಮ್ಯ ಮಾಡಿದಂತಾಗಿರುವುದಿಲ್ಲ. |

ಸಂಖ್ಯೆ: ಟಿಡಿ 10 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು